# 2 ನೇ ಹೆಚ್ಚುವರಿ ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ನಂಜನಗೂಡು.

**ಓ ಎಸ್ ನಂ.97–2012** **ಪಿ . ಡಬ್ಲುಃ 2**

| | |
|---|---|
| ಸಾಕ್ಷಿದಾರರ ಹೆಸರು<br>ವಾಸ್ತವ್ಯ | ಕೈಲಾಸೇಗೌಡ<br>ಹೆಡಿಯಾಲ ಗ್ರಾಮ, ನಂಜನಗೂಡು ತಾ. |
| | **ಸತ್ಯ ಪ್ರತಿಜ್ಞೆಯ** ಮೇರೆಗೆ **ದಿನಾಂಕ** 09–03–2023. |

**<u>ಪಾಟೀ ಸವಾಲುಃ ಪ್ರತಿವಾದಿ–1 ರವರ ಪರ ಶ್ರೀ ಎಸ್.ವಿ ವಕೀಲರಿಂದಃ</u>**

ವಾದಿ ನಮ್ಮ ಗ್ರಾಮದವರು. ನಾನು ಮತ್ತು ಅವರು ಒಂದೇ ಜನಾಂಗಕ್ಕೆ ಸೇರಿದವರಾಗಿರುತ್ತೇವೆ. ವಾದಿ ನನ್ನ ಸಂಬಂಧಿ ಎಂದರೆ ಸರಿಯಲ್ಲ. ವಾದಿ ನನ್ನ ಸಂಬಂಧಿಕರಾಗಿದ್ದರೂ ಸಹ ನನ್ನ ಸಂಬಂಧಿಕಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ವಾದಿ ನಿವೇಶನದ ಸ್ವತ್ತಿಗೆ ಸಂಬಂಧಿಸಿದಂತೆ ಈ ದಾವೆಯನ್ನು ಸಲ್ಲಿಸಿರುತ್ತಾರೆ. ಸದರಿ ನಿವೇಶನವು ಸರ್ವೇ ನಂಬರ್ ನಲ್ಲಿ ಇರುತ್ತದೆ. ಅದರ ಸರ್ವೆ ನಂ.119/6 ಬಿ1 ಆಗಿರುತ್ತದೆ. ಸದರಿ ನಿವೇಶನದ ವಿಸ್ತೀರ್ಣ ನನಗೆ ಗೊತ್ತಿಲ್ಲ. ಸದರಿ ಸ್ವತ್ತು ಹೆಡಿಯಾಲ ಗ್ರಾಮದಲ್ಲಿ ಇರುತ್ತದೆ. ದಾವಾ ಷೆಡ್ಯೂಲ್ ಸ್ವತ್ತಿನ ಚೆಕ್ಕುಬಂದಿಯನ್ನು ಹೇಳಬಲ್ಲೆ, ಪೂರ್ವಕ್ಕೆಃ–ಬಸವರಾಜಪ್ಪರವರ ಮನೆ, ಪಶ್ಚಿಮಕ್ಕೆಃ–ಅಬ್ದುಲ್ ಜಬಾರ್ ಸಾಹೇಬರ ಮನೆ, ಉತ್ತರಕ್ಕೆಃ–ಬಸವರಾಜಪ್ಪನವರ ಜಮೀನು ಹಾಗೂ ದಕ್ಷಿಣಕ್ಕೆಃ–ರಸ್ತೆ ಇರುತ್ತದೆ. ವಾದಿ ಇದೇ ಪ್ರತಿವಾದಿ ವಿರುದ್ಧ ಈ ಹಿಂದೆ ಅಸಲು ದಾವಾ ಸಂ.131/1998 ರಂತೆ ದಾವೆ ಸಲ್ಲಿಸಿದ್ದ ವಿಚಾರ ಗೊತ್ತು. ಸದರಿ ದಾವೆಯಲ್ಲಿಯೂ ಸಹ ನಾನು ಸಾಕ್ಷಿ ನುಡಿದಿರುತ್ತೇನೆ. ಹುಚ್ಚೇಗೌಡರು ಕರೆದಾಗಲೆಲ್ಲಾ ನಾನು ಸಾಕ್ಷಿ ಹೇಳುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಅದೇ ಕೇಸು ಇದು ಎಂದು ನುಡಿಯುತ್ತಾರೆ.

2. ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಿ ಬರೆದಿರುವ ವಿಚಾರ ನನಗೆ ಗೊತ್ತಿಲ್ಲ. ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಿ ದಾವಾ ಷೆಡ್ಯೂಲ್ ಸ್ವತ್ತು ವಾದಿಯರ ತಾಯಿಗೆ ಸೇರಿದ ಸ್ವತ್ತು ಎಂದು ತಿಳಿಸಿದ್ದು, ಹಾಗಾದರೆ ವಾದಿಯ ತಾಯಿ ಯಾರು ಎಂದರೆ ಸಾಕ್ಷಿ ಚಿಕ್ಕಮ್ಮ ಎಂದು ನುಡಿಯುತ್ತಾರೆ. ದಾವಾ ಷೆಡ್ಯೂಲ್ ಸ್ವತ್ತು ವಾದಿಯ ತಾಯಿಗೆ ಅವರ ತಾಯಿಯಿಂದ ಬಂತು ಎಂದು ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿದ್ದು, ಆದರೆ ಅದಕ್ಕೆ ಸಂಬಂಧಪಟ್ಟ ದಾಖಲೆಯನ್ನು

ನಾನು ನೋಡಿರುವುದಿಲ್ಲ. ನಾನು ದಾವಾ ಷೆಡ್ಯೂಲ್ ಸ್ವತ್ತಿನಲ್ಲಿ ವಾದಿ ಗೊಬ್ಬರವನ್ನು ಶೇಖರಣೆ ಮಾಡಿರುತ್ತಾರೆ ಎಂದು ಹೇಳುತ್ತಿರುವುದು ಸುಳ್ಳು ಎಂದರೆ ಸರಿಯಲ್ಲ. ಈ ಸಂಬಂಧ ವಾದಿ ಮತ್ತು ಪ್ರತಿವಾದಿಯ ನಡುವೆ ಗಲಾಟೆ ಆಗಿತ್ತೇ ಇಲ್ಲವೆ ಎಂದು ನನಗೆ ಗೊತ್ತಿಲ್ಲ. ಗಲಾಟೆ ಸಂಬಂಧ ವಾದಿ ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ದೂರು ನೀಡಿರುವ ವಿಚಾರ ನನಗೆ ಗೊತ್ತಿಲ್ಲ. ದಾವಾ ಷೆಡ್ಯೂಲ್ ಸ್ವತ್ತಿನ ಪಕ್ಕದಲ್ಲಿ ಹುಣಸೂರು ಮತ್ತು ಬೇಗೂರು ರಸ್ತೆ ಇರುತ್ತದೆ ಎಂದರೆ ಸರಿ. ಸದರಿ ರಸ್ತೆಯನ್ನು ಸರ್ಕಾರದವರು ಭೂಸ್ವಾಧೀನ ಮಾಡಿಕೊಂಡು ರಸ್ತೆಯನ್ನು ನಿರ್ಮಾಣ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ದಾವಾ ಷೆಡ್ಯೂಲ್ ಸ್ವತ್ತು ಮೊದಲಿಗೆ ಎಷ್ಟು ಗುಂಟೆ ಇತ್ತು ಎಂದು ನನಗೆ ಗೊತ್ತಿಲ್ಲ. ದಾವಾ ಷೆಡ್ಯೂಲ್ ಸ್ವತ್ತಿನ ಸರ್ವೆ ನಂಬರ್ ನಲ್ಲಿ 4 ಗುಂಟೆ ಸ್ವತ್ತನ್ನು 2 ನೇ ಪ್ರತಿವಾದಿಗೆ ಮಾರಾಟ ಮಾಡಿರುವ ವಿಚಾರ ಗೊತ್ತು. ಆದರೆ ಭೂಸ್ವಾಧೀನವಾಗಿರುವ ವಿಚಾರ ಹಾಗೂ ಒಟ್ಟು ವಿಸ್ತೀರ್ಣ ನನಗೆ ಗೊತ್ತಿಲ್ಲ. ದಾವಾ ಷೆಡ್ಯೂಲ್ ಸ್ವತ್ತಿನಲ್ಲಿ ಮೊದಲಿಗೆ ದೇವಿರಮ್ಮನವರಿಗೆ ಸೇರಿದ್ದು ಆನಂತರ ವಾದಿ ಸ್ವಾಧೀನದಲ್ಲಿ ಇರುತ್ತಾರೆ ಎಂದು ಹೇಳಿರುವುದು ಸುಳ್ಳು ಎಂದರೆ ಸರಿಯಲ್ಲ. ದಾವಾ ಷೆಡ್ಯೂಲ್ ಸ್ವತ್ತಿನ ವಿಸ್ತೀರ್ಣ 0.12 ಗುಂಟೆ ಪೈಕಿ 0.8 ಗುಂಟೆ ಸ್ವತ್ತನ್ನು ಸರ್ಕಾರ ರಸ್ತೆಗಾಗಿ ಭೂಸ್ವಾಧೀನಪಡಿಸಿಕೊಂಡಿದ್ದು, ಉಳಿದ ಸ್ವತ್ತನ್ನು 2 ನೇ ಪ್ರತಿವಾದಿಗೆ ಮಾರಾಟ ಮಾಡಿರುವುರಿಂದ ದಾವಾ ಷೆಡ್ಯೂಲ್ ಸರ್ವೇ ನಂಬರ್ ನಲ್ಲಿ ಯಾವುದೇ ಸ್ವತ್ತು ಉಳಿದಿರುವುದಿಲ್ಲ ಎಂದರೆ ಸರಿಯಲ್ಲ. ಈ ಹಿಂದೆ ವಾದಿ ಪ್ರತಿವಾದಿ ವಿರುದ್ಧ ಸಲ್ಲಿಸಿದ್ದ ಅಸಲು ದಾವೆ ಮತ್ತು ಮೇಲ್ಮನವಿ ವಜಾಗೊಂಡಿದ್ದರೂ ಸಹ ವಾದಿಗೆ ಸಹಾಯ ಮಾಡುವ ಉದ್ದೇಶದಿಂದ ಈ ದಾವೆಯಲ್ಲಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

**(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತ ಮಾಡಿಸಲಾಯಿತು)**

**ಓ . ಹೇ. ಕೇ. ಸರಿ. ಇದೆ**

**ಸಹಿ/-**

**ಕಿ.ಪ್ರ.ದ. ನ್ಯಾ ದಂ. ನಂಜನಗೂಡು**